## ಕಳೆದ ಸಂಚಿಕೆಯಲ್ಲಿ

ದೇವಣ್ಣನ ಚಾದಂಗಡಿ ದುಸ್ಥಿತಿ ತಲುಪಿದ್ದು ನೋಡಿ ಅವನಿಗೆ ಅಳುವೇ ಬಂದುಬಿಡುತ್ತದೆ. ದೇವಣ್ಣ ಮಲ್ಲೂರಿಗೆ ಬಂದಿದ್ದು ದೊಡ್ಡ ಸುದ್ದಿಯೇ ಆಗುತ್ತದೆ. ಬಂದು ಒಂದು ತಾಸಿನೊಳಗೆ ಹತ್ತಾರು ಮಂದಿ ಅವನನ್ನು ಬಂದು ಮಾತನಾಡಿದ್ದು ಅವನ ಜನಪ್ರಿಯತೆಯನ್ನು ಸಾರಿದಂತಿತ್ತು. ಎಲ್ಲರೂ ಸೇರಿ ಹೊಟೇಲನ್ನು ಶುಚಿಗೊಳಿಸಿ ಮತ್ತೆ ಸುಸ್ಥಿತಿಗೆ ತರಲು ಪ್ರಯತ್ನಿಸುತ್ತಾರೆ. ಶಿವಣ್ಣ ದೇವಣ್ಣನಿಗೆ ಈ ನಿಟ್ಟಿನಲ್ಲಿ ತುಂಬ ಸಹಾಯ ಮಾಡುತ್ತಾನೆ.



ಪುಟಿಯುತ್ತಿದ್ದಳು, ಮೈ ಮುರಿಯುತ್ತಿದ್ದಳು, ಮುಲುಕುತ್ತಿದ್ದಳು. ಗಂಡಸರು ಹೆಂಡತಿ ಹೇಳಿದಂತೆ ಕೇಳುತ್ತಾರೇನು, ತಾನು ಬೇಡವೆಂದಾಗ ಸುಮ್ಮನಿರುತ್ತಾರೇನು, ಅಂಗಡಿಯ ಹಿರೇತನವನ್ನು ತನ್ನ ಕೈಯಲ್ಲಿ ಕೊಡುತ್ತಾರೇನು ಎಂದೆಲ್ಲ ಅವಳಿಗೆ ಆಶ್ಚರ್ಯವಾಯಿತು.

'ಹೆಂಗಸು ಒಬ್ಬಾಕಿ ಇದ್ದದ್ದು ಕಂಡ ಕೂಡ್ಲೆ ಸಾಹುಕಾರನೂ ಕರ್ಯಾಂವಾ ಮತ್ತು ಭಿಕ್ಷಾ ಬೇಡಾಂವಾನೂ ಕರ್ಯಾಂವ. ನಮ್ಮ ಮನಸು ಅವರಿಗೇನು ಗೊತ್ತು.' ಆಕೆ ತನ್ನೆದುರು ಅನೇಕ ಸಲ ಹೇಳಿದಳು. ತವರುಮನೆಗೆ ಬಂದ ಮೇಲೆ ಮಂದಿಯ ನಜರು ಸರಿಸಲಿಕ್ಕಾಗದೆ ನೊಂದ ಪಾಡು ವಿವರಿಸಿದಳು. ಹಳೇ ಗಂಡನ ಪಾದ ಹಿಡಕೊಂಡು ಹೋಗುವ ಪರಿಸ್ಥಿತಿ ಎಲ್ಲಿ ಬರುತ್ತದೆಯೊ ಎಂದುಕೊಂಡಿದ್ದಳು. ಆಕೆ ಒಂದೊಂದು ಸಲ ಎಷ್ಟೊಂದು ಕಠಿಣವಾಗಿ ಮಾತಾಡುತ್ತಾಳೆ ಎನಿಸುತ್ತಿತು ದೇವಣ್ಣನಿಗೆ. ಮಾಯಕ್ಕನ ಕರಾರುಗಳು ಬಹಳ ಇವೆಯಲ್ಲವೆಂದು ದೇವಣ್ಣ ಒಂದೊಂದು ಸಲ ಚಿಂತೆಯಲ್ಲಿ ಬೀಳುವನು. ಇವಳನ್ನು ಮದುವೆಯಾಗಿ ತಾನು ತಪ್ಪು ಹೆಜ್ಜೆ ಇಟ್ಟೆನೆ? ಆಗ ತನಗೆ ನೆನಪಾದವನು ದುಂಡಪ್ಪಕಾಕಾ.



ಆತ ಒಂದು ಸಲ ಹೇಳಿದ್ದ. ಅವನ ಜೀವನ ಕಥೆಯನ್ನು ಬೇರೆಯವರು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದರು. ದುಂಡಪ್ಪನಿಗೆ ಅವನ ಹೆಂಡತಿ ಮಂಜವ್ವ ಬಹಳ ಅನ್ಯಾಯ ಮಾಡಿದ್ದಳೆಂಬ ಸುದ್ದಿಯಿತ್ತು. ತಾನು ಯಾವತ್ತೂ ಕೇಳಲು ಹೋಗಿರಲಿಲ್ಲ. ಅವತ್ತು ಕಾಕಾನಿಗೆ ಏನನಿಸಿತ್ತೋ ಏನೋ ತನ್ನ ಹಿಂದಿನ ಕತೆಯನ್ನೆಲ್ಲ ಹೇಳಿ ಕಣ್ಣೀರು ತಂದ. ತನಗೂ ಆವತ್ತು ಕಣ್ಣಲ್ಲಿ ದಳದಳ ನೀರು.

'ದ್ಯಾವಣ್ಣ, ನಾವು ಏನು ಮಾಡ್ತೇವಿ ಅಂದ್ರ ನಮ್ಮ ದೃಷ್ಟಿಕೋನಕ್ಕ ಮಂದಿಯನ್ನ ಕಟ್ಟಿಹಾಕಲಿಕ್ಕೆ ಪ್ರಯತ್ನ ಮಾಡ್ತೇವಿ. ಆದರ ಪ್ರಪಂಚ ಅನ್ನೋದು ಹಂಗ ನಡೆಯೋದಿಲ್ಲ. ನನ್ನ ಹೇಂತಿ ಜೋಡಿ ನಾನು ಸುಮ್ಮನೆ ಜಗಳ ಮಾಡಿಕೊಂಡೆ. ಆಕೀ ಬಾಳ ಬಿರುಸು ಅಂತ ಅನಿಸಿತ್ತು ಖರೆ. ಯಾವಾಗ್ಲೂ ಒಂದೊಂದೆ ಮಾತು, ಯಾವಾಗಲೂ ತನ್ನ ಲೋಕದಾಗ ಇರಾಕಿ. ತನ್ನ ತವರುಮನೆ ಬಗ್ಗೆ ಬಾಳ ಗರ್ವ. ನಮ್ಮ ಅವ್ವ ಆಕಿ ಬಗ್ಗೆ ದಿನಾ ಕಂಪ್ಲೇಂಟ್ ಹೇಳಾಕಿ. ಹೆಂಡತಿ ಅಹಂಕಾರ ಮುರೀಬೇಕು ಅಂತ ತೀರ್ಮಾನ ಮಾಡಿದೆ. ಮನ್ನಾಗ ಜಗಳ ಸುರು ಆದವು. ನಮ್ಮ ತೋಟದ ಮನಿಯೊಳಗ ನಾವು ದಿನಾಲೂ ಮಲಕ್ಕೊಳಲಿಕ್ಕೆ ಹೋಗತಿದ್ವಿ. ಊಟ ಮುಗಿದ ಮ್ಯಾಲ ಆಕಿ ಮೊದಲೆ ಹೋಗಿರತಿದ್ಲು. ನನ್ನ ಸಲುವಾಗಿ ಆಕೆ ಕಾಯಲಿ ಅಂತ ಅವ್ವನ ಜೋಡಿ ಮಾತಾಡ್ತಾ ಕುಂತು, ನಾ ಸ್ವಲ್ಪ ತಡಾ ಆಗಿ ಹೋಗತಿದ್ದೆ. ಎಷ್ಟೊ ದಿನ ಜಗಳ ಆಗಿರತಿದ್ವು. ಜಗಳ ಆದ್ರೂ ನಾವು ಮಲಕ್ಕೊಳ್ಳಾಕ ಮಾತ್ರ ಅಲ್ಲಿಗೆ ಹೋಗೆ ಹೋಗಿರತಿದ್ವಿ. ಅವತ್ತೂ ಹೀಂಗ ಮನಿಯಾಗ ಎದಕ್ಕೋ ಕಲಹ ಆಗಿತ್ತು. ರಾತ್ರಿ ಕುಡಿಯಲು ನೀರು ಬೇಕು ಅಂತ ನೀರಿನ ಸ್ಟೀಲ್ ಚರಿಗಿ ಹಿಡಕೊಂಡು 'ನಾ ಹೋಗಿರ್ತೇನಿ ನೋಡ್ರಿ, ಮುಂದೆ' ಅಂತ ಹೇಳುವಂಗ ನನ್ನ ಕಡೆ ನೋಡಿ ಮುಂದ ಹೋದ್ಲು. ಅವತ್ತು ಯಾಕೊ ನನಗ ಬಾಳ ಸಿಟ್ಟು ಬಂದಿತ್ತು. ಅವಳಿಗೆ ಬುದ್ಧಿ ಕಲಿಸೋಣು ಅಂತ ತೋಟದ ಮನಿ ಕಡೆ ಹೋಗಲಿಲ್ಲ.

'ಇವತ್ತು ಇಲ್ಲೇ ಮಲಕ್ಕೋತೇನಿ, ಯವ್ವಾ' ಎಂದೆ. ಆಕೆ ಹೂಂ ಅಂದಳು. ಆದರೆ ತಾಸಿನ ನಂತರ ಅವಳಿಗೆ ಏನನಿಸಿತೊ ಏನೋ 'ಏಯ್ ಮಗನೆ, ಅಷ್ಟು ದೊಡ್ಡ ಮನ್ನಾಗ ಸೊಸಿ ಒಬ್ಬಾಕಿ ಆಗ್ತಾಳ. ಹೋಗು.' ಎಂದಳು. ಆದರೆ ನಾನು ಹಟ ಮಾಡಿ ಹೋಗಲಿಲ್ಲ.

ಅವ್ವ ಮಧ್ಯರಾತ್ರಿ ಮತ್ತೊಮ್ಮೆ ಹೋಗುವಂತೆ ಎಬ್ಬಿಸಿದಳು. ಅವ್ವ ಅಷ್ಟು ಹೇಳಿದರೂ ನಾ ಜಗ್ಗಲಿಲ್ಲ. 'ನೀನು ಸುಮ್ಮನಿರು ಯವ್ವಾ, ಆಕೀಗಿ ಸ್ವಲ್ಪ ಬುದ್ಧಿ ಕಲಿಸೋಣು.' ಅವ್ವನಿಗೆ ಯಾಕೋ ನಿದ್ದೆಯೆ ಬರಲಿಲ್ಲವಂತೆ. ಚುಮುಚುಮು ನಸುಕಾಗುವಾಗ ಅವ್ವ ನನ್ನನ್ನ ಎಬ್ಬಿಸಿ ಕಳಿಸಿದಳು. ದಿನಾ ಹೋಗುವಂಗ ಹೋದೆ. ಎಷ್ಟೊತ್ತಾದರೂ ಬಾಗಿಲ ತಗೀಲಿಲ್ಲ. ಬಾಜೂಕಿನ ಕಿಟಕಿಯೊಳಗ ಹೋಗಿ ಮಲಕ್ಕೊಂಡಾಳೇನು ಅಂತ ಬಗ್ಗಿ ನೋಡಿದೆ. ನನ್ನ ಎದಿ ಒಮ್ಮೆಲೆ ಧಸ್ ಅಂತು. ಮಂಜವ್ವ ಉರುಲು ಹಾಕಿಕೊಂಡಿದ್ಲು. ನಮ್ಮ ಮನಿಯೊಳಗೆ ಎಲ್ಲಾರಿಗೂ ಆಘಾತ ಆತು. ಮುಂದೆ ಸ್ವಲ್ಪ ದಿನದಾಗ ನಮ್ಮ ಅವ್ವ ತೀರಿಕೊಂಡ್ಲು.

'ನಿನ್ನ ಹೆಂಡತಿಯನ್ನ ನಾನೆ ಕೊಂದಂಗಾತೊ ದುಂಡಪ್ಪ' ಎನ್ನುವುದು ಅವಳ ಕೊನೆಯ ಮಾತಾಯಿತು. ಸಾಯುವ ಎಂಟು ದಿನ ಮೊದಲು ಆಕೆಗೆ ಮಾತೇ ಹೋಗಿಬಿಟ್ಟಿದ್ದವು. ಆಕೆ ನನ್ನನ್ನು ನೋಡಿದಾಗಲೆಲ್ಲ ನನಗೆ ಕೆಟ್ಟೆನಿಸುತ್ತಿತ್ತು. ಆಕೆ ಸೊಸೆಯನ್ನು ಕೊಂದಳೊ? ಇಲ್ಲವೋ ನಾನು ನನ್ನ ಹೆಂಡತಿ ಮತ್ತು ಅವ್ವನನ್ನು ಕೊಂದೆನೋ? ಅದು ಎಂದೆಂದಿಗೂ ತಿಳೀಲಾರದು. ನನ್ನೊಳಗಿನ ಅಹಂಕಾರ ನನ್ನ ಇಡೀ ಜೀವನ ಹಾಳು ಮಾಡ್ತು. ಮಂಜವ್ವನ ಬಗ್ಗೆ ನಾ ತಪ್ಪು ತಿಳಕೊಂಡಿದ್ದೆ. ಆಕೆಯಲ್ಲಿರೊ ಅಭಿಮಾನವನ್ನ ಅಹಂಕಾರ ಅಂತ ತಿಳ್ಕೊಂಡೆ. ಅದಕ್ಕಂತನ ಯಾರ ಬಗ್ಗೆಯೂ ನ್ಯಾಯಾಧೀಶರಂಗ ನಾವು ತೀರ್ಪು ಕೊಡಲಿಕ್ಕೆ ಹೋಗಬಾರದು'. ಅವನ ಕತೆ ಕೇಳಿ ದೇವಣ್ಣ ಎರಡು ದಿನ ನಿದ್ದೆ ಮಾಡಿರಲಿಲ್ಲ. ಮಾಯಕ್ಕ ತವರುಮನೆಯಲ್ಲಿ ಸುಮ್ಮನೆ ಬಿದ್ದುಕೊಂಡಿದ್ದರೆ ಮೊದಲ ಗಂಡ ಸುಮ್ಮನಿರುತ್ತಿದ್ದನೇನೊ? ಯಾವಾಗ ಅವಳು ದೇವಪ್ಪನ ಜೊತೆ ಬೈಕಿನಲ್ಲಿ ಅಡ್ಡಾಡಲು ಸುರು ಮಾಡಿದಳೊ, ಯಾವಾಗ ಮೊದಲಿಗಿಂತ ಈಗ ಸುಖವಾಗಿರುವಂತೆ ಕಂಡಳೊ ಆಗ ಅವನಲ್ಲಿ ಅಸೂಯೆಯ ಜ್ವಾಲೆ ಹೊತ್ತಿ ಉರಿಯತೊಡಗಿತು. ಕೆಲವರು ಬಂದು ಅವನಿಗೆ ಆ ಸುದ್ದಿ, ಈ ಸುದ್ದಿ ಹೇಳುತ್ತ 'ಅಲ್ಲೋ ಹುಚ್ಚಪ್ಪ, ಮಾಯವ್ವನ್ನ ಸುಮ್ಮಸುಮ್ಮನ ಬಿಟ್ಟೆಯಲ್ಲೊ? ಈಗ ನೋಡು, ಆಕಿ ಚಾದಂಗಡಿ ದೇವಣ್ಣನನ್ನ ಹಿಡಕೊಂಡು ಹೋದ್ಲು.' ಅದು ತನಗಾದ ಅವಮಾನವೆಂದು ಮುತ್ತಪ್ಪ ಹಲ್ಲು ಕಡಿಯತೊಡಗಿದ.

ಒಂದು ದಿನ ಡುಗುಡುಗು ಎನ್ನುತ್ತ ಬುಲೆಟ್ ಮೋಟಾರ ಬೈಕೊಂದು ಮಲ್ಲೂರಿನ ಚಾದಂಗಡಿಯ ಮುಂದೆ ನಿಂತಿತು. 'ಇಂವ ಮುತ್ತಪ್ಪ ಇದ್ದಂಗ ಅದಾನಲ್ಲ' ಎಂದುಕೊಂಡಳು ಮಾಯಕ್ಕ. ಆಗಷ್ಟೆ ಹೊಟೇಲಿಗೆ ಹಾಲು ತುಂಬಿಸುವ ಖಾಲಿ ಕ್ಯಾನ್‌ಗಳನ್ನು ತಂದಿದ್ದ ಶಿವಣ್ಣನೊಂದಿಗೆ ಆಕೆ ಮಾತಾಡುತ್ತಿದ್ದಳು. ದೇವಣ್ಣನ ಹಾಲಿನ ಡೇರಿ ವ್ಯಾಪಾರ ಹೆಚ್ಚಾಗಲು ಮಾಯಕ್ಕನೆ ಕಾರಣ. ಈಗ ದೊಡ್ಡ ದೊಡ್ಡ ಮೂರ್ನಾಲ್ಕು ಕ್ಯಾನ್‌ಗಳು ತುಂಬುತ್ತಿದ್ದವು. ಮೂರು ಯುವಕರು ಮುಂಜಾನೆಯೆ ಹಾಲು ತುಂಬಿಸಿಕೊಂಡು ಬರುವವರು. ಹೊಟೇಲಿನಲ್ಲಿ ಇಟ್ಟಿರುವ ಹಾಲಿನ ಕ್ಯಾನ್‌ಗಳನ್ನು ತನ್ನ ಜೀಪಿನಲ್ಲಿಯೇ ಹೊಂಗಲಕ್ಕೆ ಹೋಗಿ ಕೊಟ್ಟು ಬರುವುದು ಶಿವಣ್ಣನ ಡ್ಯೂಟಿ. ಅವನ ಭಾಗ್ಯವೆಂಬಂತೆ ದುಂಡಪ್ಪಕಾಕಾನ ಜೀಪನ್ನು ಅವನೆ ಓಡಿಸುತ್ತಾನೆ. 'ಅಲ್ಲೊ ಶಿವು, ನಿನ್ನ ಸಲುವಾಗಿನೇ ಕಾಕಾ ಜೀಪ್ ತಗೊಂಡಂಗೈತಿ.' ಶಿವಣ್ಣನಿಗೆ ಮಾಯಕ್ಕ ತಮಾಷೆ ಮಾಡುತ್ತಿದ್ದಾಗಲೇ ಬೈಕ್‌ನಿಂದ ಇಳಿದ ವ್ಯಕ್ತಿ ಹೊಟೇಲ್ ಸಮೀಪಿಸಿದ್ದ. ಆತ ಮುತ್ತಣ್ಣನೆ ಎನ್ನುವುದು ಖರೆ ಆಗುತ್ತಿದ್ದಂತೆಯೆ ಅವಳು ಒಮ್ಮಿಂದೊಮ್ಮೆಲೆ ಗಾಬರಿಗೊಂಡಳು. ಹೆಚ್ಚು ಕಡಿಮೆ ಆಕೆ ಅವನನ್ನು ಮರೆತೆಬಿಟ್ಟಿದ್ದಳು. ಹೌದಲ್ಲ? ಅವನೆ! ಆ ಕ್ರಿಮಿಯೆ! ಅವಳ ಮನಸ್ಸು ವಿಪರೀತ ಅಸಹ್ಯಪಟ್ಟುಕೊಂಡಿತು. (ಸಶೇಷ)